ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 2062 |
| **ಸದಸ್ಯರ ಹೆಸರು** | : | ಶ್ರೀ ಎಂ.ನಾಗರಾಜು<br>( ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 25.03.2026 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ 13 ಮೀನುಗಾರಿಕಾ ಬಂದರುಗಳಲ್ಲಿ ಹೂಳೆತ್ತುವಿಕೆ ಯೋಜನೆಯ ಪ್ರಸ್ತುತ ಹಂತವೇನು; ಈ ಯೋಜನೆಗೆ ಎಷ್ಟು ಅನುದಾನ ಮೀಸಲಿಡಲಾಗಿತ್ತು ಮತ್ತು ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; | ರಾಜ್ಯದಲ್ಲಿ 11 ಮೀನುಗಾರಿಕೆ ಬಂದರುಗಳು ಮತ್ತು 13 ಮೀನು ಇಳಿದಾನ ಕೇಂದ್ರಗಳಿರುತ್ತವೆ.<br><br>2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-64 ರಲ್ಲಿ ರಾಜ್ಯದ 8 ಮೀನುಗಾರಿಕೆ ಬಂದರುಗಳಲ್ಲಿ ಮೀನುಗಾರಿಕಾ ದೋಣಿಗಳು ಸುಗಮವಾಗಿ ಮತ್ತು ವೇಗವಾಗಿ ಚಲಿಸಲು ಅನುಕೂಲವಾಗಿಸಲು ನ್ಯಾವಿಗೇಷನ್ ಚಾನಲ್‌ಗಳಲ್ಲಿ ಹಂತಹಂತವಾಗಿ ಹೂಳೆತ್ತಲಾಗುವುದು ಎಂದು ಘೋಷಿಸಲಾಗಿರುತ್ತದೆ. ಅದರಂತೆ, ಈ ಕೆಳಕಂಡ ಬಂದರುಗಳಲ್ಲಿ ಹೂಳೆತ್ತುವ ಕಾಮಗಾರಿಗಳನ್ನು ರೂ.2000.00 ಲಕ್ಷ ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ, ರೂ.16,83,61,000/- ಅನುದಾನವನ್ನು ಅನುಷ್ಠಾನ ಸಂಸ್ಥೆಯಾದ ಕರ್ನಾಟಕ ಜಲಸಾರಿಗೆ ಮಂಡಳಿಗೆ ಬಿಡುಗಡೆಗೊಳಿಸಿದ್ದು, ಸದರಿ ಅನುದಾನದಲ್ಲಿ ಈವರೆಗೆ ಒಟ್ಟು ರೂ. 14,82,68,000/- ಗಳನ್ನು ವೆಚ್ಚ ಮಾಡಲಾಗಿದೆ.<br><br>ಕ್ರಸಂ. / ಮೀನುಗಾರಿಕೆ ಬಂದರು / ವೆಚ್ಚ (ರೂ. ಲಕ್ಷಗಳಲ್ಲಿ)<br>1. ಮಂಗಳೂರು 323.53<br>2. ಮಲ್ಪೆ 265.93<br>3. ಗಂಗೊಳ್ಳಿ 372.92<br>4. ಭಟ್ಕಳ 286.66<br>5. ಕಾರವಾರ 179.64<br><br>2023-24ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯ ಸಂಪದ (PMMSY) ಯೋಜನೆಯಡಿ ಈ ಕೆಳಗಿನ ಬಂದರುಗಳಲ್ಲಿ ಡ್ರೆಡ್ಜಿಂಗ್ ಕೈಗೊಳ್ಳಲು ಅನುಮೋದನೆ ಪಡೆಯಲಾಗಿದ್ದು, ಕಾಮಗಾರಿ ಪ್ರಾರಂಭಿಸ ಬೇಕಾಗಿರುತ್ತದೆ. ಪ್ರಸ್ತುತ ಯಾವುದೇ ವೆಚ್ಚ ಮಾಡಿರುವುದಿಲ್ಲ. |

<table>
<tr><td></td><td></td><td>
<table>
<tr><th>ಕ್ರ. ಸಂ</th><th>ಮೀನುಗಾರಿಕೆ ಬಂದರು</th><th>ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)</th></tr>
<tr><td>1.</td><td>ಆಮದಳ್ಳಿ</td><td>561.00</td></tr>
<tr><td>2.</td><td>ಬೇಲಿಕೇರಿ-ಹಾರವಾಡ</td><td>414.08</td></tr>
<tr><td>3.</td><td>ತದಡಿ</td><td>265.59</td></tr>
</table>
2024-25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 249 ರಲ್ಲಿ "ಮೀನುಗಾರಿಕಾ ದೋಣಿಗಳು ತಂಗುವ ಜೆಟ್ಟಿಗಳು ಹಾಗೂ ಬಂದರುಗಳಲ್ಲಿ ಹೂಳು ತೆಗೆಯುವುದು ಮತ್ತು ಮಲ್ಪೆ, ಹೊನ್ನಾವರ, ಭಟ್ಕಳ, ಕುಂದಾಪುರ ಮತ್ತು ಬೇಲಿಕೇರಿ ಬಂದರುಗಳಲ್ಲಿ ಎರಡು ವರ್ಷಗಳಿಗೊಮ್ಮೆ ಹೂಳೆತ್ತುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು" ಎಂದು ಘೋಷಿಸಿದ್ದು, ಅದರಂತೆ ವಿವಿಧ ಬಂದರು ಪ್ರದೇಶಗಳಲ್ಲಿ ಹೂಳೆತ್ತುವ ಬಗ್ಗೆ ಪೂರ್ವ ಬ್ಯಾತಿಮೆಟ್ರಿಕ್ ಸರ್ವೆಯನ್ನು ರೂ. 69.32 ಲಕ್ಷಗಳ ವೆಚ್ಚದಲ್ಲಿ ನಡೆಸಲಾಗಿದ್ದು, ಒಟ್ಟು 13 ಸ್ಥಳಗಳಲ್ಲಿ ಡ್ರೆಡ್ಜಿಂಗ್ ಕೈಗೊಳ್ಳಲು ರೂ. 6788.00 ಲಕ್ಷಗಳ ಅನುದಾನ ಅಂದಾಜಿಸಲಾಗಿದೆ. ವಿವರವನ್ನು ಅನುಬಂಧದಲ್ಲಿ ನೀಡಿದೆ.
</td></tr>
<tr><td>(ಆ)</td><td>ಕರಾವಳಿ ಪ್ರದೇಶದಲ್ಲಿ ಒಳನಾಡು ನೀರಿನ ನಿರ್ವಹಣೆ ಮತ್ತು ಸಾರಿಗೆಯನ್ನು ಸುಧಾರಿಸಲು "ಪಶ್ಚಿಮ ವಾಹಿನಿ" ಯೋಜನೆಗೆ ಇಲಾಖೆಯ ಹೆಚ್ಚುವರಿ ಅನುದಾನವನ್ನು ಈ ಆಯವ್ಯಯದಲ್ಲಿ ಕೋರಿದೆಯೇ;</td><td>ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕರ್ನಾಟಕ ಜಲಸಾರಿಗೆ ಮಂಡಳಿಯಿಂದ "ಪಶ್ಚಿಮ ವಾಹಿನಿ" ಯೋಜನೆಯಡಿ ಪ್ರಸ್ತುತ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.</td></tr>
<tr><td>(ಇ)</td><td>ನೇತ್ರಾವತಿ ಮತ್ತು ಗುರುಪುರ ಹಿನ್ನೀರಿನಲ್ಲಿ 17 ನಿಲ್ದಾಣಗಳನ್ನು ಒಳಗೊಂಡ 30 ಕಿ.ಮೀ. ಉದ್ದದ ಮತ್ತು ಸುಮಾರು 2500 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಯೋಜಿಸಿರುವ ರಾಜ್ಯದ ಮೊದಲ ವಾಟರ್ ಮೆಟ್ರೋ ಯೋಜನೆಯ ಪ್ರಸ್ತುತ ಹಂತವೇನು? (ಮಾಹಿತಿ ನೀಡುವುದು)</td><td>ಮಂಗಳೂರು ವಾಟರ್ ಮೆಟ್ರೋ ಯೋಜನೆಯಡಿ ನೇತ್ರಾವತಿ ಮತ್ತು ಗುರುಪುರ ಹಿನ್ನೀರಿನಲ್ಲಿ 19 ನಿಲ್ದಾಣಗಳು ಹಾಗೂ 30 ಕಿ.ಮೀ. ಉದ್ದದ ನೀರಿನ ಮಾರ್ಗ (Channel) ರಚಿಸಲು ₹180.00 ಕೋಟಿ ಮೊತ್ತದ ರೇಖಾ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.<br>ಯೋಜನೆಯ ಮೊದಲ ಹಂತವಾಗಿ ಹಣಕಾಸು ಮತ್ತು ವ್ಯವಹಾರ ಸಂಬಂಧಿತ ಸಲಹೆಗಳಿಗಾಗಿ ತಾಂತ್ರಿಕ ಸಮಾಲೋಚಕರನ್ನು ನೇಮಕ ಮಾಡಿದ್ದು, ಅವರ ವರದಿಯ ಆಧಾರದ ಮೇಲೆ ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ ಅನುಷ್ಠಾನಗೊಳಿಸಲಾಗುವುದು.</td></tr>
</table>

**IDD 26 PSP 2026**

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**

## ಅನುಬಂಧ

ರೂ.ಲಕ್ಷಗಳಲ್ಲಿ

| ಕ್ರ. ಸಂ | ಹೂಳೆತ್ತುವಿಕೆ ಕಾಮಗಾರಿಯ ವಿವರ | ಅಂದಾಜು ಮೊತ್ತ | ಬಿಡುಗಡೆ ಮಾಡಲಾದ ಅನುದಾನ | ಪ್ರಸ್ತುತ ಹಂತ |
|---|---|---|---|---|
| ಉತ್ತರ ಕನ್ನಡ ಜಿಲ್ಲೆ | | | | |
| 1 | DREDGING AT BELAMBAR FISHERY HARBOUR IN ANKOLA TALUK OF UTTARA KANNADA DISTRICT | 185.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| 2 | ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಅಳ್ವೆದಂಡೆಯಲ್ಲಿ ಮೀನುಗಾರಿಕಾ ಜೆಟ್ಟಿಯ ನದಿ ಪಾತ್ರದಲ್ಲಿ, ಚಾನಲ್‌ನಲ್ಲಿ ಹೂಳೆತ್ತುವ ಕಾಮಗಾರಿ. | 450.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| 3 | ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಅಳ್ವೆದಂಡೆಯಲ್ಲಿ ಶಶಿಹಿತ್ಲು ನದಿಯ ಚಾನಲ್‌ನಲ್ಲಿ ಹೂಳೆತ್ತುವ ಕಾಮಗಾರಿ. | 425.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| 4 | MAINTAENANCE DREDGING IN FRONT OF WHARF AT HONNAVAR FISHERY HARBOUR IN HONNAVAR TALUK OF UTTARA KANNADA DISTRICT | 1400.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| 5 | DREDGING OF SOIL AND ROCKS FOR SAFE NAVIGATION OF FISHING VESSEL AT APPROACH CHANNEL OF HONNAVAR FISHERY HARBOUR IN HONNAVAR TALUK OF UTTARA KANNADA DISTRICT (CROSS SECTION B) | 188.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| 6 | DREDGING OF SOIL AND ROCKS FOR SAFE NAVIGATION OF FISHING VESSEL AT APPROACH CHANNEL OF HONNAVAR FISHERY HARBOUR IN HONNAVAR TALUK OF UTTARA KANNADA DISTRICT (CROSS SECTION C) | 540.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| 7 | DREDGING OF SOIL AND ROCKS FOR SAFE NAVIGATION OF FISHING VESSEL AT APPROACH CHANNEL OF HONNAVAR FISHERY HARBOUR IN HONNAVAR TALUK OF UTTARA KANNADA DISTRICT (CROSS SECTION D) | 605.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |

| ಉಡುಪಿ ಜಿಲ್ಲೆ | | | | |
|---|---|---|---|---|
| 8 | ಉಡುಪಿ ಜಿಲ್ಲೆ, ಉಡುಪಿ ತಾಲ್ಲೂಕು, ಮಲ್ಪೆ ಬೊಬ್ಬರ್ಯಪಾದೆ ಜೆಟ್ಟಿಯಿಂದ ಅಳಿವೆ ತನಕ ನಿರ್ವಹಣಾ ಹೋಳೆತ್ತು ಕಾಮಗಾರಿ | 200.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| 9 | ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು, ಕೋಡಿಬೇಂಗ್ರೆ ಜೆಟ್ಟಿಯ ಮುಂಭಾಗ ಮತ್ತು ಅಳಿವೆಯಲ್ಲಿ ನಿರ್ವಹಣಾ ಹೂಳೆತ್ತುವ ಕಾಮಗಾರಿ. | 150.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| 10 | ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು, ಕೋಡಿಕನ್ಯಾನ ಜೆಟ್ಟಿಯಿಂದ ಅಳಿವೆ ತನಕ ನಿರ್ವಹಣಾ ಹೂಳೆತ್ತುವ ಕಾಮಗಾರಿ. | 1200.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| 11 | Maintenance Dredging Work at basin and channel portion of Shiroor Alivegadde Fish landing centre in Byndoor taluk, Udupi District. | 115.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| 12 | Maintenance Dredging at Koderi Fishery harbour in Byndore Taluk of Udupi District. | 310.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| ದಕ್ಷಿಣ ಕನ್ನಡ | | | | |
| 13 | ದಕ್ಷಿಣ ಕನ್ನಡ ಜಿಲ್ಲೆಯ ಸಸಿಹಿತ್ಲು ಮೀನುಗಾರಿಕಾ ಜೆಟ್ಟಿ ಮುಂಭಾಗದಲ್ಲಿ ಮತ್ತು ಚಾನೆಲ್ ನಲ್ಲಿ ಹೂಳೆತ್ತುವ ಕಾಮಗಾರಿ. | 415.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| 14 | ದಕ್ಷಿಣ ಕನ್ನಡ ಜಿಲ್ಲೆಯ ಬೊಕ್ಕಪಟ್ಟಣ ಮೀನುಗಾರಿಕಾ ಜೆಟ್ಟಿ ಮುಂಬಾಗದಲ್ಲಿ ಮತ್ತು ಚಾನೆಲ್ ನಲ್ಲಿ ಹೂಳೆತ್ತುವ ಕಾಮಗಾರಿ | 405.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| 15 | ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಕೋಟೆಪುರ ಪ್ರದೇಶದಲ್ಲಿ ಹೂಳೆತ್ತುವ ಕಾಮಗಾರಿ. | 200.00 | - | ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. |
| | ಒಟ್ಟು | **6788.00** | - | |

ಮೀನುಗಾರಿಕೆ ನಿರ್ದೇಶಕರು